ಜ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಿಸಿದವರ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರಿ ಅಥವಾ ಬಾಗಾಯ್ತು.	ವಿಸ್ತೀರ್ಣ.	ಎಕ್ಕರೆ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ ಮೊಲಗು.	ಸರ್ಕಾರಕ್ಕೆ ಇನ್ನೇನಾದರೂ ಬರಬೇಕಾದ ಪಟ್ಟಿ ಸಹಿತವಾದ ಬಾಕಿ ಮೊಲಗು.
					ರೂ.			ಎ. ಗು.	ರೂ. ಆ. ಪೈ.	ರೂ.	ರೂ. ಆ. ಪೈ.	ರೂ. ಆ. ಪೈ.
ಸಾಗರ	ಬೆಳಂದೂರು	ಕೆಂಗೂರು ಅನಾಂ	ಚಿದಂಬರಘಟ್ಟಾ ನಗ್ಗುರೇರು	...	..	...	ಖುಷ್ಕಿ ...	436 5	171 11 2	ರೂ. 1,000	ರೂ. ಆ. ಪೈ. 56 2 9	392 6 3
							ತರಿ ...	338 30	1,057 11 2			
							ಪರಂಪೋಕು.	87 11	5 8 0			
								862 6	1,234 14 4			

ಜತುರ್ಗಡಿ.

ಪೂರ್ವಕ್ಕೆ —ಸಾಗರ ತಾಲ್ಲೂಕು ಅಳ್ಳಹಳ್ಳಿ ಉದ್ದನೂರು ಗಡಿ.
ಪಶ್ಚಿಮಕ್ಕೆ —ಗೌಜ ಮತ್ತು ಮುಲಂದೂರು ಹಳ್ಳದ ಗಡಿ.
ದಕ್ಷಿಣಕ್ಕೆ —ಸಾಗರ ತಾಲ್ಲೂಕು ಗಿಳಲಗುಂಡಿ, ತಂಗಳವಾಡಿ, ಬೈರದ ಗಡಿ.
ಉತ್ತರಕ್ಕೆ —ದಣಂದೂರು, ಅಳ್ಳಹಳ್ಳಿ ಗಡಿ.
ಈ ಮಧ್ಯೆ ಇರುವ ಸರ್ಕಾರಿ ಗ್ರಾಮ ಜಾತಾ ದೇವಾದಾಯ ಬಾಕಿ ಇನಾಂಪೂರಾ.

ಮಹಮ್ಮದ್ ರಜಾ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೭—೦೮ನೆ ಇಸವಿ ಮಿ|| ಅರ್ಜೀ ನಂಬರು 208.

ದೇವನಹಳ್ಳಿಲಿ ವಾಸವಾಗಿದ್ದ ಅಂಜೈಯಪ್ಪನ ಮಗ ಮೃತಪಟ್ಟ ನಂಜುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವನಹಳ್ಳಿಲಿರುವ ಚನ್ನಬಸಪ್ಪ ಉರಫ್ ಪಿಳ್ಳಪ್ಪ, ಅಂಜೈಯಪ್ಪ ಮೈನರ್, ಗಾರ್ಡಿಯರ್ ತಾಯಿ ಚಿಕ್ಕವೀರಮ್ಮ, ಮೃತಪಟ್ಟ ಸದರೀ ನಂಜುಂಡಪ್ಪನವರಿಗೆ ಖಾನಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೇವನಹಳ್ಳಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 21,770—1—2 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚನ್ನಬಸಪ್ಪ ಉರಫ್ ಪಿಳ್ಳಪ್ಪ, 2ನೆ ಅಂಜೈಯ್ಯಪ್ಪ ಮೈನರ್, ಗಾರ್ಡಿಯರ್ ಚಿಕ್ಕವೀರಮ್ಮನ ಅರ್ಜಿಯನ್ನು ಸ್ ೧೯೦೭ನೆ ಇಸವಿ ಅಕ್ಟೋಬರು ತಿಂಗಳು ತಾರೀಖು 11ರಲ್ಲೂ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೭ನೆ ಇಸವಿ ಸೆಪ್ಟಂಬರು ತಿಂಗಳು 30ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಇ. ಜಯರಾಮ ಐಯ್ಯರ್,
ಅಫಿಷಿಯೇಟಿಂಗ್ ಸಬಾರ್ಡಿನೇಟ್ ಜಡ್ಜ್.